ಕ್ರ. ಸಂ. 57,
149ನೇ ಅಧಿವೇಶನ

<u>ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಪಿ.ಆರ್.ರಮೇಶ್ ಇವರ ಶೂನ್ಯ ವೇಳೆಯ ಸೂಚನೆಗೆ ಉತ್ತರ</u>

<u>ಪ್ರಶ್ನೆ:</u>

ದಿ: 12.02.2023ರ ವಿಜಯವಾಣಿ, ದೈನಂದಿನ ಪತ್ರಿಕೆಯಲ್ಲಿ, ಸುದ್ದಿಯಾಗಿರುವ ವಿಷಯದನ್ವಯ, ಕೋಲಾರ ಜಿಲ್ಲೆ, ನರಸಾಪುರ ಹೋಬಳಿಯ ಕೇಂದ್ರದಲ್ಲಿರುವ **Outpost Police Station** (ಹೊರ ಠಾಣೆಯು) ವಕ್ಕಲೇರಿ ಮುಖ್ಯ ಪೊಲೀಸ್ ಠಾಣೆಯ ಅಧೀನದಲ್ಲಿ ಇರುವುದು ಸರಿಯಷ್ಟೆ. ನರಸಾಪುರ ಹಾಗೂ ವಕ್ಕಲೇರಿ ಮಧ್ಯೆ 7 ಕಿ.ಮೀ. ದೂರ ಅಂತರವಿದ್ದು, ನರಸಾಪುರ ಗ್ರಾಮವು, ಬೆಂಗಳೂರು-ಕೋಲಾರ ಹೆದ್ದಾರಿ ಪಕ್ಕದಲ್ಲಿದ್ದು, ನರಸಾಪುರ ಹೋಬಳಿಯ ಸುತ್ತಮುತ್ತಲೂ ಕೈಗಾರಿಕೆ ಪ್ರದೇಶಾಭಿವೃದ್ಧಿಯಾಗುವ ಜೊತೆಗೆ ವಸತಿ ಬಡಾವಣೆಗಳೂ ಸಹ ಅಭಿವೃದ್ಧಿ ಹೊಂದುತ್ತಿವೆ. ರಾಜ್ಯ ಸರ್ಕಾರದ ಹಲವಾರು ಇಲಾಖೆಗಳೂ ಸಹ, ಹೋಬಳಿ ಕೇಂದ್ರವಾದ ನರಸಾಪುರದಲ್ಲಿಯೇ ಕಾರ್ಯ ನಿರ್ವಹಿಸುತ್ತಿದ್ದು, ಆರ್ಥಿಕ ಚಟುವಟಿಕೆಗಳೂ ಸಹ ವೇಗವಾಗಿ ಬೆಳೆಯುತ್ತಿದೆ. ಹೊರ ರಾಜ್ಯದಿಂದ ಹಲವು ನಾಗರೀಕರು ಬಂದು ಇಲ್ಲಿಯೇ ನೆಲೆಸುತ್ತಿರುವುದನ್ನು ತಿಳಿಯಬಹುದಾಗಿರುತ್ತದೆ. ನರಸಾಪುರ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ಜನಸಂಖ್ಯೆಯು ಗಣನೀಯವಾಗಿ ಏರುತ್ತಿದ್ದು **KIADB** ಯಿಂದ ಕೈಗಾರಿಕಾ ಪ್ರದೇಶ ಇನ್ನೂ ಹೆಚ್ಚು ಅಭಿವೃದ್ಧಿಯನ್ನು ಹೊಂದುವ ಅವಕಾಶವಿರುತ್ತದೆ. ನರಸಾಪುರ ಸುತ್ತ ಮುತ್ತ ಆಗುತ್ತಿರುವ ಅಪರಾಧ ಪ್ರಕರಣಗಳ ಸಂಖ್ಯೆ ಹಾಗೂ ಇತರೆ ಕಾನೂನು ಮತ್ತು ಸುವ್ಯವಸ್ಥೆಯನ್ನು ವಕ್ಕಲೇರಿಗೆ ಹೋಲಿಸಿದಾಗ ನರಸಾಪುರದ ವ್ಯಾಪ್ತಿಯಲ್ಲಿಯೇ ಅತೀ ಹೆಚ್ಚಿರುತ್ತದೆ. ಈ ಎಲ್ಲಾ ಹಿನ್ನೆಲೆಯಲ್ಲಿ ಈಗಾಗಲೇ ನರಸಾಪುರ ಹೋಬಳಿಯ ಕೇಂದ್ರದಲ್ಲಿರುವ **Outpost Police Station** (ಹೊರ ಠಾಣೆಯ) ಸ್ಥಾನಮಾನ ನೀಡಿರುವುದನ್ನು, ಪೊಲೀಸ್ ಠಾಣೆಯಾಗಿ ಮೇಲ್ದರ್ಜೆಗೇರಿಸಿ, ಪ್ರತ್ಯೇಕ ಪೊಲೀಸ್ ಠಾಣೆಗೆ ಮಂಜೂರಾತಿ ನೀಡಿ, ಈ ಕೂಡಲೇ ನರಸಾಪುರ ಹೋಬಳಿ ಕೇಂದ್ರದಲ್ಲಿ, ಪೊಲೀಸ್ ಠಾಣೆ ಸ್ಥಾಪಿಸಲು ಕ್ರಮ ಕೈಗೊಳ್ಳುವಂತೆ ಕೋರಿ ಮಾನ್ಯ ಗೃಹ ಮಂತ್ರಿಗಳಿಗೆ ಒತ್ತಾಯಿಸುವುದರ ಜೊತೆಗೆ, ಸದರಿ ವಿಷಯವನ್ನು ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಲು ಇಚ್ಚಿಸುತ್ತೇನೆ.

<u>ಉತ್ತರ:</u>

ನರಸಾಪುರ, ಜಕ್ಕಸಂದ್ರ ಕೈಗಾರಿಕಾ ಪ್ರದೇಶವು ಸುಮಾರು 700 ಎಕರೆ ಜಮೀನಿನಲ್ಲಿ ಸ್ಥಾಪನೆಯಾಗಿದ್ದು, ಈ ಪ್ರದೇಶವನ್ನು ಸುಮಾರು 40 ಪ್ರಮುಖ ಕಂಪನಿಗಳಿಗೆ ಹಂಚಿಕೆ ಮಾಡಲಾಗಿದ್ದು, ಅದರಲ್ಲಿ ಈಗಾಗಲೇ ಅನೇಕ ಕಂಪನಿಗಳು ಕೆಲಸ ಪ್ರಾರಂಭಿಸಿರುತ್ತವೆ.

ಈ ಕೈಗಾರಿಕಾ ಪ್ರದೇಶವು ಅತ್ಯಂತ ಸೂಕ್ಷ್ಮ ಪ್ರದೇಶವಾಗಿರುತ್ತದೆ. ಈ ಕೈಗಾರಿಕಾ ಪ್ರದೇಶದಲ್ಲಿ 8 ಕಿ.ಮೀ. ರಾಷ್ಟ್ರೀಯ ಹೆದ್ದಾರಿ-75 ಹಾದು ಹೋಗಿದ್ದು, ರಸ್ತೆ ಅಪಘಾತಗಳು ಸಂಭವಿಸಿ, ಹೆಚ್ಚಿನ ಸಂಖ್ಯೆಯಲ್ಲಿ ಸಾವು-ನೋವುಗಳು ಸಂಭವಿಸುತ್ತಿರುತ್ತವೆ ಹಾಗೂ ಇತರೆ ಅಪರಾಧಗಳು ಆಗುತ್ತಿರುತ್ತವೆ. ಈ ಕೈಗಾರಿಕಾ ಪ್ರದೇಶದ ಗ್ರಾಮಗಳು ರಾಜಕೀಯವಾಗಿ ಅತಿ ಸೂಕ್ಷ್ಮ ಪ್ರದೇಶಗಳಾಗಿರುತ್ತದೆ. ಜೆಲ್ಲಿಕ್ರಷರ್ ಫ್ಯಾಕ್ಟರಿಗಳು ಇರುವುದರಿಂದ ಸಿವಿಲ್ ವ್ಯಾಜ್ಯಗಳು ಹೆಚ್ಚಾಗಿರುತ್ತದೆ. ಕಂಪನಿಗಳಲ್ಲಿ ನಿರಂತರವಾಗಿ ಹಗಲು, ರಾತ್ರಿ ಪಾಳಿ ಕೆಲಸಗಳು ನಡೆಯುತ್ತಿದ್ದು, ಕೆಲಸ ಮುಗಿಸಿ ಅವೇಳೆಯಲ್ಲಿ ಕಾರ್ಮಿಕರು ಮನೆಗಳಿಗೆ ಹೋಗುವ ಸಮಯದಲ್ಲಿ

ದರೋಡೆ ಮತ್ತು ಸುಲಿಗೆಕೋರರಿಂದ ಅನಾಹುತಗಳಾಗುವ ಸಂಭವಗಳಿದ್ದು, ಕೂಡಲೇ ಸ್ಥಳಕ್ಕೆ ಧಾವಿಸಿ ಕ್ರಮ ಕೈಗೊಳ್ಳಲು ಹಾಗೂ ಇತರೆ ಸಮಸ್ಯೆಗಳಿಗೆ ಕೂಡಲೇ ಸ್ಪಂದಿಸಬೇಕಾಗಿರುವುದರಿಂದ ವೇಮಗಲ್ ಪೊಲೀಸ್ ಠಾಣಾ ವ್ಯಾಪ್ತಿಯ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯ ನರಸಾಪುರ, ಜಕ್ಕಸಂದ್ರ ಕೈಗಾರಿಕಾ ಪ್ರದೇಶದಲ್ಲಿ ಹೊಸದಾಗಿ ಪೊಲೀಸ್ ಠಾಣೆಯನ್ನು ಸ್ಥಾಪಿಸುವುದು ಅವಶ್ಯಕವಾಗಿರುತ್ತದೆ.

ಆದಕಾರಣ, ಪ್ರಸ್ತಾಪಿತ ನರಸಾಪುರ ಪೊಲೀಸ್ ಹೊರ ಠಾಣೆಯನ್ನು ಪೂರ್ಣ ಪ್ರಮಾಣದ ಪೊಲೀಸ್ ಠಾಣೆಯನ್ನಾಗಿ ಮೇಲ್ದರ್ಜೆಗೇರಿಸಲು, ಸದರಿ ಠಾಣೆಯ ವ್ಯಾಪ್ತಿ, ಜನಸಂಖ್ಯೆ ಹಾಗೂ ದಾಖಲಾದ ಅಪರಾಧ ಪ್ರಕರಣಗಳ ವಿವರ ಕೆಳಕಂಡಂತಿರುತ್ತದೆ.

| ಪ್ರಸ್ತಾಪಿತ ಠಾಣೆ | ಠಾಣೆಗಳ ಸರಹದ್ದು | ಗ್ರಾಮಗಳ ಸಂಖ್ಯೆ | ವಿಸ್ತೀರ್ಣ | ಜನಸಂಖ್ಯೆ | 03 ವರ್ಷದ ಅಪರಾಧ ಪ್ರಕರಣಗಳ ಸಂಖ್ಯೆ | | |
|---|---|---|---|---|---|---|---|
| | | | | | 2020 | 2021 | 2022 |
| ಪೂರ್ಣ ಪ್ರಮಾಣದ ನರಸಾಪುರ ಠಾಣೆ | ವೇಮಗಲ್ ಠಾಣಾ ವ್ಯಾಪ್ತಿಯ ನರಸಾಪುರ ಹೊರ ಠಾಣೆಗೆ ಸಂಬಂಧಪಟ್ಟ ಗ್ರಾಮಗಳ ವಿವರ | 30 | 50 ಚ.ಕಿ.ಮೀ. | 35,000 | 124 | 91 | 76 |
| | ಕೋಲಾರ (ಗ್ರಾ) ಠಾಣಾ ವ್ಯಾಪ್ತಿಯಿಂದ ನರಸಾಪುರ ಠಾಣೆಗೆ ಸೇರ್ಪಡೆಯಾಗುವ ಗ್ರಾಮಗಳ ವಿವರ | 49 | 70 ಚ.ಕಿ.ಮೀ. | 36,000 | 90 | 92 | 102 |
| | ಮಾಲೂರು ಪೊಲೀಸ್ ಠಾಣಾ ವ್ಯಾಪ್ತಿಯಿಂದ ನರಸಾಪುರ ಠಾಣೆಗೆ ಸೇರ್ಪಡೆಯಾಗುವ ಗ್ರಾಮಗಳ ವಿವರ | 19 | 35 ಚ.ಕಿ.ಮೀ. | 15,383 | 37 | 46 | 61 |
| | **ಒಟ್ಟು ಗ್ರಾಮಗಳು** | **98** | 155 ಚ.ಕಿ.ಮೀ. | **86,383** | **251** | **229** | **239** |

ಮೇಲೆ ವಿವರಿಸಲಾದಂತೆ ಪ್ರಸ್ತಾಪಿತ ನರಸಾಪುರ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ ವಾರ್ಷಿಕ ಸರಾಸರಿ 240 ಅಪರಾಧ ಪ್ರಕರಣಗಳು ದಾಖಲಾಗಿದ್ದು, ಸದರಿ ಪೊಲೀಸ್ ಠಾಣೆ ಸೃಜನೆಯಾದಲ್ಲಿ ಉಳಿಯುವ ಮಾತೃ ಠಾಣೆಗಳ ವ್ಯಾಪ್ತಿ, ಜನಸಂಖ್ಯೆ ಮತ್ತು ಅಪರಾಧ ಪ್ರಕರಣಗಳ ಕುರಿತು ಪರಿಶೀಲಿಸಿ ಸೂಕ್ತವೆಂದು ಕಂಡುಬಂದಲ್ಲಿ ಮುಂದಿನ ಕ್ರಮ ಕೈಗೊಳ್ಳಲಾಗುವುದು.

**ಸಂಖ್ಯೆ: ಹೆಚ್‌ಡಿ 28 ಪಿಓಪಿ 2023**

(ಆರಗ ಜ್ಞಾನೇಂದ್ರ)
ಗೃಹ ಸಚಿವರು.